ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 83-88
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಐತಿಹಾಸಿಕ ವ್ಯಕ್ತಿಯಾಗಿ ಮಲೆಯ ಮಾದೇಶ್ವರ

**ಉಷಾ ಎನ್[1] ಮತ್ತು ಡಾ. ಕೆ. ಸೌಭಾಗ್ಯವತಿ[2]**

[1]ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
[2] ಪ್ರಾಧ್ಯಾಪಕರು, ಕನ್ನಡ ವಿಭಾಗ, ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

**Abstract:**
*ಆಧುನಿಕ ನಾಗರಿಕತೆಯ ಪರಿಚಯವಿಲ್ಲದ ಜನರು ಅನಕ್ಷರಸ್ಥರೇ ಹೊರತು ಅಜ್ಞಾನಿಗಳಲ್ಲ. ಮನುಷ್ಯ ಜಗತ್ತಿನ ಜ್ಞಾನಭಂಡಾರದಲ್ಲಿ ಅಕ್ಷರ ರೂಪದ ವಿದ್ಯೆ ಇತ್ತೀಚಿನದಾಗಿದೆ. ಸಾವಿರಾರು ವರ್ಷಗಳ ಹಿಂದಿನಿಂದ ಮೌಖಿಕ ಪರಂಪರೆಯಲ್ಲಿ ಹರಿದು ಬಂದಿರುವ ಜ್ಞಾನವನ್ನು ಕೆಲವು ವಿದ್ವಾಂಸರು ಅಕ್ಷರ ರೂಪದಲ್ಲಿ ಹಿಡಿದಿಡುವ ಪ್ರಯತ್ನವನ್ನು ಆರಂಭಿಸಿದರು. ಈ ಪ್ರಯತ್ನದ ಫಲವೇ ನಾವಿಂದು ನೋಡುತ್ತಿರುವ ಕೋಟ್ಯಂತರ ಗ್ರಂಥ ರಾಶಿಗಳಾಗಿವೆ. ಜಗತ್ತಿನಾದ್ಯಂತ ಇಂಥದೊಂದು ಪ್ರಯತ್ನ ಆರಂಭವಾದ ಕಾರಣದಿಂದಲೇ ಎಲೆಮರೆ ಕಾಯಿಯಂತೆ, ಕಂಡೂ ಕಾಣದಂತೆ ಅಡಗಿದ್ದ ಎಷ್ಟೋ ಮಹಾಕಾವ್ಯಗಳು ಗ್ರಂಥರೂಪವನ್ನು ಪಡೆದುಕೊಳ್ಳಲು ಸಾಧ್ಯವಾಯಿತು. ಹೀಗೆ ಜಾನಪದ ಸಾಹಿತ್ಯದ ಸೃಷ್ಟಿ ಆರಂಭವಾಯಿತು.*

**Keywords:** *ಮೌಖಿಕ ಪರಂಪರೆ, ಜನಪದ ಮಹಾಕಾವ್ಯ, ಮಲೆ ಮಾದೇಶ್ವರ ಕಾವ್ಯ.*

## ಪೀಠಿಕೆ

ಜನಪದ ಸಾಹಿತ್ಯದಲ್ಲಿ ಜನಪದ ಕಲೆ, ಜನಪದ ನೃತ್ಯ, ಜನಪದ ವೈದ್ಯ, ಜನಪದ ಉಡುಗೆ, ಜನಪದ ಸಂಗೀತ ಹೀಗೆ ಜನಪದರ ಜೀವನಕ್ಕೆ ಸಂಬಂಧಿಸಿದ ಎಲ್ಲ ಅಂಶಗಳೂ ಸಹ ಮಿಳಿತಗೊಂಡವು. ಜನಪದ ಸಂಸ್ಕೃತಿಯು ಎಷ್ಟರ ಮಟ್ಟಿಗೆ ಸಮೃದ್ಧವಾಗಿದೆಯೋ ಅಷ್ಟೇ ಸಮೃದ್ಧವಾಗಿ ಜನಪದ ಸಾಹಿತ್ಯ ರಚನೆಯು ಕೂಡ ಬೆಳೆಯಿತು. 'ಜನಪದ ಸಾಹಿತ್ಯ ಎನ್ನುವುದು ವಾಙ್ಮಯ ರೂಪದ ಜಾನಪದ' ಎಂದು ಹೇಳಿದ ಹಾ.ಮಾ. ನಾಯಕರು ಜಾನಪದವನ್ನು ಸಾಹಿತ್ಯಿಕ ಬಗೆ, ಭಾಷಿಕ ಬಗೆ, ವೈಜ್ಞಾನಿಕ ಬಗೆ ಹಾಗೂ ಕ್ರಿಯಾತ್ಮಕ ಬಗೆ ಎಂದು ವಿಂಗಡಿಸಿದ್ದಾರೆ. ಈ ನಾಲ್ಕರ ಸಮಷ್ಟಿ ಸಂಪ್ರದಾಯವನ್ನೇ ನಾವು ಜಾನಪದವೆಂದು ಕರೆಯುವುದು ಎಂಬುದನ್ನು ಖಚಿತಪಡಿಸಿದ್ದಾರೆ. ವಿದ್ಯಾವಂತ ಸಮಾಜದಲ್ಲೂ ಸಹ ಜಾನಪದ ಅಂಶಗಳು ಇರಬಹುದಾದರೂ, ನಾಗರಿಕತೆಯ ಪ್ರಭಾವಕ್ಕೆ ಒಳಗಾಗದಿರುವ ಗ್ರಾಮೀಣ ಪ್ರದೇಶಗಳಲ್ಲಿ ಮಾತ್ರ ಅದು ಶುದ್ಧವಾಗುಳಿದು ಬಂದಿದೆ. ಕಥೆ, ಕಾವ್ಯ, ಮಹಾಕಾವ್ಯ, ಲಾವಣಿ, ಒಗಟು, ಗಾದೆ, ನಂಬಿಕೆ, ಹಬ್ಬ-ಹುಣ್ಣಿಮೆ, ಪುರಾಣ ಇವುಗಳನ್ನೆಲ್ಲ ಒಳಗೊಂಡಿರುವ ಜಾನಪದದ ಅಧ್ಯಯನ ಪಾಶ್ಚಾತ್ಯ ರಾಷ್ಟ್ರಗಳಿಗೆ ಹೊಸದಲ್ಲವಾದರೂ ನಮಗೆ ಇದು ಬಹಳ ಇತ್ತೀಚಿನದು. ನಮ್ಮ ಜಾನಪದ ಸಂಸ್ಕೃತಿ ನಮಗೆ

**Please cite this article as:** ಉಷಾ. ಎನ್ ಮತ್ತು ಕೆ. ಸೌಭಾಗ್ಯವತಿ. (2024). ಐತಿಹಾಸಿಕ ವ್ಯಕ್ತಿಯಾಗಿ ಮಲೆಯ ಮಾದೇಶ್ವರ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(3), 83–88

ಹೊಸದಲ್ಲ; ಆದರೆ ಅದನ್ನು ಅಧ್ಯಯನಕ್ಕೆ ಒಳಪಡಿಸುವ ನಮ್ಮ ರೂಢಿ ಮಾತ್ರ ಇತ್ತೀಚಿನದಾಗಿದೆ.

ಹಲವು ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳಿಂದ ಶ್ರೀಮಂತವಾಗಿರುವ ನಮ್ಮ ದೇಶದಲ್ಲಿ ಜನಪದ ಸಂಸ್ಕೃತಿಯೂ ಸಹ ಅಷ್ಟೇ ಶ್ರೀಮಂತವಾಗಿದೆ. ಮೌಖಿಕ ಧಾರೆಯಾಗಿ ಹರಿಯುತ್ತಿದ್ದ ಜಾನಪದ ಕಾವ್ಯಗಳನ್ನು ಲಿಖಿತ ರೂಪದಲ್ಲಿ ದಾಖಲಿಸುವ ಪ್ರಯತ್ನವನ್ನು ಎಲ್ಲಾ ಭಾಷೆಯ ವಿದ್ವಾಂಸರೂ ಆರಂಭಿಸಿದ್ದಾರೆ. ಕನ್ನಡದ ಮಟ್ಟಿಗೂ ಈ ಪ್ರಯತ್ನ ಪ್ರಾರಂಭವಾಗಿ ಹಲವು ದಶಕಗಳೇ ಕಳೆದಿವೆ. ರಾಗೌ, ಹಾ.ಮಾ.ನಾಯಕರು, ಜೀ.ಶಂ.ಪ ಹೀಗೆ ಹಲವು ವಿದ್ವಾಂಸರ ಹೆಸರುಗಳು ಜಾನಪದ ಕ್ಷೇತ್ರದಲ್ಲಿ ಸದಾ ಅನುರಣಿಸುತ್ತಿರುತ್ತದೆ. ಹಾಗೆಯೇ ನಮ್ಮ ಕನ್ನಡ ಜಾನಪದ ಕ್ಷೇತ್ರದಲ್ಲಿ ಸದಾಕಾಲಕ್ಕೂ ನೆನಪಿಡಲೇಬೇಕಾದ ಮತ್ತೊಂದು ಹೆಸರು ಪಿ.ಕೆ.ರಾಜಶೇಖರ ಅವರದ್ದು. ವಿಶ್ವವಿದ್ಯಾನಿಲಯದಂಥ ದೊಡ್ಡ ಸಂಸ್ಥೆಯೊಂದು ಹಲವು ಯೋಜನೆಗಳನ್ನು ಹಾಕಿಕೊಂಡು ಮಾಡಬಹುದಾದಷ್ಟು ಕಾರ್ಯಗಳನ್ನು ಅವರು ವೈಯಕ್ತಿಕ ನೆಲೆಯಲ್ಲಿ ಶಿಸ್ತುಬದ್ಧವಾಗಿ ಶ್ರೇಷ್ಠ ಮಾದರಿಯಲ್ಲಿ ಮಾಡಿರುವುದು ಗಮನಾರ್ಹವಾಗಿದೆ. ನಿವೃತ್ತಿಯ ನಂತರವೂ ಅವರು ತಾವು ಈ ಹಿಂದೆ ಸಂಗ್ರಹಿಸಿದ ಜನಪದ ಸಾಹಿತ್ಯದ ಸಂಪಾದನೆ ಮತ್ತು ಪ್ರಕಟಣಾ ಕಾರ್ಯದಲ್ಲಿ ಅತೀವವಾದ ಆಸಕ್ತಿಯನ್ನು ತೋರಿದರು. ಪಿ.ಕೆ.ರಾಜಶೇಖರ ಅವರು ಸಂಪಾದಿಸಿರುವ ಜನಪದ ಮಹಾಕಾವ್ಯಗಳಲ್ಲಿ 'ಮಲೆಯ ಮಾದೇಶ್ವರ' ಮೊದಲ ಮಹಾಕಾವ್ಯವಾಗಿದೆ. ಈ ಕಾವ್ಯದ ಸಂಗ್ರಹ, ಸಂಪಾದನೆಯಲ್ಲಿ ಅವರು ವಹಿಸಿದ ಆಸಕ್ತಿ, ತಾಳ್ಮೆ, ಶ್ರದ್ಧೆ, ಪ್ರಾಮಾಣಿಕತೆ ಎಲ್ಲದರ ಫಲವಾಗಿ ಇಂದು ನಮ್ಮ ಮುಂದೆ 'ಮಲೆಯ ಮಾದೇಶ್ವರ' ಮಹಾಕಾವ್ಯವು ಬೃಹತ್ ಗಾತ್ರದ ಗ್ರಂಥವಾಗಿ ಮೈದಳೆದು ನಿಂತಿದೆ.

ಮಲೆಯ ಮಾದೇಶ್ವರನ ಇತಿಹಾಸವನ್ನು ಗಮನಿಸುವುದಾದರೆ, ಮಾದೇಶ್ವರನು ಐತಿಹಾಸಿಕ ವ್ಯಕ್ತಿ ಎಂಬುದು ನಿರ್ವಿವಾದವಾದರೂ ಅವನ ಕಾಲದ ಬಗ್ಗೆ ಖಚಿತವಾಗಿ ಹೇಳುವಷ್ಟು ದಾಖಲೆಗಳು ಲಭ್ಯವಾಗಿಲ್ಲ. ಮಾದೇಶ್ವರನು ಸುತ್ತೂರು ಮಠಕ್ಕೆ ಬಂದಿದ್ದನೆಂಬ ಹೇಳಿಕೆಗಿಂತಲೂ ಖಚಿತವಾಗಿ ಕುಂತೂರು ಮಠಕ್ಕೆ ಬಂದಿದ್ದನೆಂಬುದು ಹೈದರಾಲಿ ಶಾಸನ ಹಾಗೂ ಜನಪದ ಸಾಹಿತ್ಯದಿಂದ ತಿಳಿದುಬರುವುದರಿಂದ ಮತ್ತು ಕುಂತೂರು ಮಠದ ಪ್ರಾಚೀನತೆ ಕ್ರಿ.ಶ.1512 ಎಂದು ಕುಂತೂರು ಶಾಸನದಿಂದ ತಿಳಿದುಬರುವುದರಿಂದ ಮಾದೇಶ್ವರನ ಕಾಲ ನಿರ್ವಿವಾದವಾಗಿ 16ನೇ ಶತಮಾನವೆಂದು ಒಪ್ಪಬೇಕಾಗುತ್ತದೆ.

ಮಂಟೇಸ್ವಾಮಿ ಮತ್ತು ಮಾದೇಶ್ವರರು ಉತ್ತರ ದೇಶದಿಂದ ದಕ್ಷಿಣಕ್ಕೆ ಬಂದವರೆಂದು ಜನಪದ ಸಾಹಿತ್ಯ ಸಾರಿ ಹೇಳುತ್ತದೆ.ಆದರೆ ಅವರಿಬ್ಬರೂ ಒಟ್ಟಿಗೆ ಬಂದರೆಂಬುದಕ್ಕೆ ಮಾದೇಶ್ವರ ಮಹಾಕಾವ್ಯದಲ್ಲಿ ಆಧಾರವಿದ್ದರೂ ಮಂಟೇಸ್ವಾಮಿ ಮಹಾಕಾವ್ಯದಲ್ಲಿ ಎಲ್ಲೂ ಇದರ ಪ್ರಸ್ತಾಪವಿಲ್ಲ. ಮಂಟೇಸ್ವಾಮಿ ಹರಿಜನರಲ್ಲಿ ಬಲಗೈ ಪಂಗಡಕ್ಕೆ ಸೇರಿದವನೆಂದು, ಮಾದೇಶ್ವರನು ಎಡಗೈ ಪಂಗಡಕ್ಕೆ ಸೇರಿದವನೆಂದು ಜನಪದ ಸಾಹಿತ್ಯದಿಂದ ತಿಳಿದುಬರುತ್ತದೆ.ಇದನ್ನು ಕ್ರಿ.ಶ.1838ರಲ್ಲಿದ್ದ ದೇವಚಂದ್ರನ 'ರಾಜಾವಳಿ ಕಥೆ'ಯೂ ಸಮರ್ಥಿಸುತ್ತದೆ.

ರಾಜಾವಳಿ ಕಥೆಯ ಕರ್ತೃ ದೇವಚಂದ್ರನು ಅವನ ಕಾಲದ ಹಿರಿಯರಲ್ಲಿ ವಿಷಯವನ್ನು ಸಂಗ್ರಹಿಸಿ ಮಾದೇಶ್ವರನ ಬಗೆಗೆ ಬರೆದಿರಬಹುದಾದರೂ ಅವನ ಎಲ್ಲ ಹೇಳಿಕೆಗಳು ಒಪ್ಪುವಂತಿಲ್ಲ. ಮಾದೇಶ್ವರ ಮಾದಿಗರವನೆಂಬುದಕ್ಕೆ ಜನಪದ ಸಾಹಿತ್ಯದಲ್ಲೂ ಆಧಾರವಿರುವುದರಿಂದ ಈ ವಿಷಯವನ್ನು ಒಪ್ಪಬಹುದಾಗಿದೆ. ಕೆಲವು ಜನಪದ ವಕ್ತೃಗಳ ಪ್ರಕಾರ ಮೈಸೂರಿನ ಚಾಮುಂಡಿ ಮಾದೇಶ್ವರನ ತಂಗಿ; ಮತ್ತೆ ಕೆಲವರ ಹೇಳಿಕೆಯಲ್ಲಿ ಮಡದಿ.ಇದು ಏನಾದರೂ ಆಗಿರಲಿ ಮಾದೇಶ್ವರನಿಗೂ ಚಾಮುಂಡಿಗೂ ಒಂದಲ್ಲ

ಒಂದು ಬಗೆಯ ಸಂಬಂಧ ಇತ್ತೆಂದು ಸ್ಪಷ್ಟವಾಗುತ್ತದೆ. ಇನ್ನು ನಂಜನಗೂಡಿನ ನಂಜುಂಡ, ಮಾದೇಶ್ವರ ಮತ್ತು ಚಾಮುಂಡಿಯರ ಪ್ರಣಯ ಪ್ರಸಂಗವಂತೂ ಸುಪ್ರಸಿದ್ಧ ಕಥಾನಕ. ಇದರಿಂದಾಗಿ ನಂಜುಂಡ, ಮಾದೇಶ್ವರ ಮತ್ತು ಚಾಮುಂಡಿ ಇವರಿಗೆ ಪರಸ್ಪರ ಸಂಬಂಧವಿತ್ತೆಂದು ಖಚಿತವಾಗುತ್ತದೆ. ನಂಜುಂಡ–ಚಾಮುಂಡಿಯರ ಪ್ರಣಯ ಪ್ರಸಂಗದಿಂದ ಮಾದೇಶ್ವ ಬೇಸರಗೊಂಡು 'ಇವಳ ಮುಖದರ್ಶನ ನನಗೆ ಕೂಡದು' ಎಂದು ಹೋಗಿ ಏಳುಮಲೆಯ ನಡುವೆ ನೆಲೆಗೊಂಡನೆ ಎಂಬ ಅನುಮಾನಕ್ಕೆ ಜನಪದ ಸಾಹಿತ್ಯದಲ್ಲೂ ಆಧಾರಗಳಿರುವುದರಿಂದ ಇವರೆಲ್ಲರೂ ಐತಿಹಾಸಿಕ ವ್ಯಕ್ತಿಗಳಾಗಿದ್ದು ಕಾಲನಂತರ ಪೂಜಾರ್ಹರಾದರೆಂದು ಹೇಳಬಹುದಾಗಿದೆ.

ದೇವಚಂದ್ರನು ತನ್ನ ದಾಖಲೆಗಳ ಸರಣಿಯಲ್ಲಿ ಮಾದೇಶ್ವರನ ವಿಷಯವನ್ನು ವಿಜಯನಗರ ಸಾಮ್ರಾಜ್ಯ ಕ್ಷೀಣಿಸುತ್ತಿದ್ದ ಕಾಲಕ್ಕೆ ಸೇರಿಸಿದ್ದಾನೆ. ಬಹುಶಃ ಅವನ ದೃಷ್ಟಿಯಲ್ಲಿ ಮಾದೇಶ್ವರನ ಕಾಲ 15–16ನೇ ಶತಮಾನವೇ ಆಗಿರಬೇಕು. ಆ ಕಾಲಕ್ಕೆ ದಕ್ಷಿಣಭಾರತದ ಉದ್ದಗಲಕ್ಕೆಲ್ಲ ಮುಸ್ಲಿಮರು ಹರಡಿಕೊಂಡಿದ್ದರೆಂಬ ಸತ್ಯಕ್ಕೆ ಮಾದೇಶ್ವರ ಮಹಾಕಾವ್ಯದ ನೂರೊಂದಯ್ಯನ ಕವಟ್ಲಿನ ಫೀರ್‌ಖಾನ್ ಸಾಬಿ ಪ್ರಸಂಗವೂ ಸಾಕ್ಷಿಯಾಗಿದೆ. ಹೀಗೆ ಮಾದೇಶ್ವರ ಪರಂಪರೆಯನ್ನು ಶಿಷ್ಟ ಹಾಗೂ ಜನಪದ ಸಾಹಿತ್ಯಗಳೆರಡರಲ್ಲೂ ಕಾಣಬಹುದಾಗಿದೆ. 1750ರಲ್ಲಿ ಮಿಣ್ಯದ ಗುರುಸಿದ್ದ ಕವಿ ಬರೆದ 'ಮಾದೇಶ್ವರ ಸಾಂಗತ್ಯ' ಮೊದಲ ಶಿಷ್ಟ ಕಾವ್ಯವಾಗಿದೆ. ಇದರಲ್ಲಿ ಮಾದೇಶ್ವರ ಕ್ಷೇತ್ರದ ಬಣ್ಣನೆ, ಮಾದೇಶ್ವರರು ಲಿಂಗವಾದುದು, ಜಾತ್ರೆಯ ವರ್ಣನೆಗಳನ್ನು ಒಳಗೊಂಡ ಮೂರು ಸಂಧಿಗಳಿವೆ. ಮೊದಲೇ ತಿಳಿಸಿದಂತೆ ಜೈನಕವಿ ದೇವಚಂದ್ರನು ಬರೆದ 'ರಾಜಾವಳಿ ಕಥೆ'ಯು ಎರಡನೆಯದು. ಜನಪದ ಕಥೆಗಳ ಆಧಾರದ ಮೇಲೆ ಮಾದೇಶ್ವರನನ್ನು ದೇವನಾಗಿ ಚಿತ್ರಿಸಿದ್ದಾನೆ. ಮೂರನೆಯ ಕೃತಿ 1929ರಲ್ಲಿ ಫ.ಗು.ಹಳಕಟ್ಟಿಯವರು ಸಂಪಾದಿಸಿ ಪ್ರಕಟಿಸಿದ 'ನಿರಂಜನ ವಂಶರತ್ನಾಕರ' ಇದನ್ನು ಬರೆದು ಕವಿ ಯಾರೆಂಬುದರ ಬಗ್ಗೆ ಸ್ಪಷ್ಟ ಮಾಹಿತಿ ಲಭ್ಯವಾಗಿಲ್ಲ. ಇದು ಮಾದೇಶ್ವರನ ಮಹಿಮೆಯನ್ನೆ ಬಣ್ಣಿಸುವ ಕಾವ್ಯವಲ್ಲ. ಬದಲಿಗೆ ಇದರಲ್ಲಿ ವೀರಶೈವ ಪರಂಪರೆಯ ಗುರು ಚರಿತ್ರೆ ಹೇಳಿಕೊಂಡು ಬರುವಾಗ ಅನೇಕ ಅಂಶಗಳನ್ನು ಬಹಳ ನಿಷ್ಠುರವಾಗಿ ಹೇಳುತ್ತಾ ಬಂದಿದ್ದಾರೆ. ಮತ್ತೊಂದು ಕೃತಿ 1933ರಲ್ಲಿ ಕುಂತೂರು ಸಿ.ಸಂಗಪ್ಪಶಾಸ್ತ್ರೀಗಳು ರಚಿಸಿರುವ 'ಶ್ರೀ ಸುತ್ತೂರು ಸಿಂಹಾಸನದ ಗುರುಪರಂಪರೆ' ಇದರಲ್ಲಿ ಮಾದೇಶ್ವರ ಚರಿತ್ರೆಗೆ ಸಂಬಂಧಿಸಿದ ಕೆಲವು ಸಂಗತಿಗಳು ಲಭ್ಯವಾಗಿವೆ.

ಈ ಎಲ್ಲ ಆಧಾರಗಳಿಂದ ಮಾದೇಶ್ವರನ ಕಾಲ ಹಾಗೂ ಜಾತಿಗಳಿಗೆ ಸಂಬಂಧಿಸಿದ ವಿಷಯಗಳೂ ಸ್ಪಷ್ಟವಾಗುತ್ತವೆ. ಮಾದೇಶ್ವರನ ತಂದೆ ತಾಯಿಗಳ ಬಗ್ಗೆ ಜನಪದ ಸಾಹಿತ್ಯವು ಉತ್ತರದೇಶದ ಉತ್ತಮಪುರದ ಕಾಳೆಕಲ್ಯಾಣದೇವರು ಮತ್ತು ಉತ್ತರೋಜಮ್ಮ ಎಂದು ಹೇಳುತ್ತದೆ. ಆದರೆ ಕುಂತೂರಿನ ಸಿದ್ದಪ್ಪಶಾಸ್ತ್ರೀಗಳ 'ಮಲೆಮಾದೇಶ್ವರ ನಿಜಪುರಾಣ'ದಲ್ಲಿ ಚುಂಚ ದಂಪತಿಗಳೆಂದು ಹೇಳಲಾಗಿದೆ. ಮಾದೇಶ್ವರನ ಬಗೆಗೆ ನಾವು ತಿಳಿಯಬೇಕಾದರೆ ಜನಪದ ಸಾಹಿತ್ಯವನ್ನೇ ಅವಲಂಬಿಸಬೇಕಾಗುತ್ತದೆ. ಮಾದೇಶ್ವರ ಕಾವ್ಯವು ವಂಶಪಾರಂಪರ್ಯವಾಗಿ ಬಂದ ಮೌಖಿಕ ಸಾಹಿತ್ಯ.ಇದು ಕಾಲಕಾಲಕ್ಕೆ ಸಾಕಷ್ಟು ಬದಲಾವಣೆಗಳನ್ನು ಕಂಡಿರುವುದು ಸಹಜವೇ ಆಗಿದೆ.ಇದರ ಮೂಲ ಕರ್ತೃ ಯಾರೆಂಬುದನ್ನು ಹುಡುಕುವುದು ನಿಜಕ್ಕೂ ಕಷ್ಟದ ಸಂಗತಿಯೇ ಆಗಿದೆ.ಆದರೆ ಈ ಕಾವ್ಯ ಅನೇಕ ಜನಪದರ ಸೃಷ್ಟಿ ಎಂದರೆ ಬಹುಶಃ ಸಮಂಜಸವಾದೀತು. ಮಾದೇಶ್ವರ ಪರಂಪರೆಯ 'ಕಂಸಾಳೆಗುಡ್ಡರು' ಇದನ್ನು ಹಾಡಿಕೊಂಡು ಬಂದಿದ್ದಾರೆ. ಬ್ರಾಹ್ಮಣರನ್ನು ಬಿಟ್ಟು ಒಕ್ಕಲಿಗರು, ಕುರುಬರು, ಹರಿಜನರು, ಉಪ್ಪಲಿಗರು ಮೊದಲಾದವರಲ್ಲಿ ಈ ವೃತ್ತಿಗಾಯಕರನ್ನು ಕಾಣಬಹುದಾಗಿದೆ. ಹೆಂಗಸರು ಬಿಡಿ ಪದ್ಯಗಳನ್ನು

ಮಾತ್ರ ಹಾಡುತ್ತಾರೆಯೇ ಹೊರತು ಇಡೀ ಮಹಾಕಾವ್ಯವನ್ನು ಹಾಡುವುದಿಲ್ಲ.

ಕಂಸಾಳೆಯವರು ಮಾದೇಶ್ವರನ ಕಥೆಯನ್ನು ಏಳುರಾತ್ರಿ ವ್ಯಾಪ್ತಿಯಲ್ಲಿ ಏಳು ಸಾಲುಗಳಲ್ಲಿ ತಾಳುಗಥೆ, ಶ್ರವಣ, ಬೇವಿನಕಾಳಿ, ಆಲಂಬಾಡಿ ಜುಂಜೇಗೌಡ, ಸರಗೂರಯ್ಯ, ಇಕ್ಕೇರಿ ದೇವಮ್ಮ ಹಾಗೂ ಸಂಕಮ್ಮನ ಕಥೆಗಳನ್ನು ಹಾಡುತ್ತಾರೆ. ಮಾದೇಶ್ವರ ಕಾವ್ಯದ ಕಥಾತಂತ್ರ ಕೆಲವೊಮ್ಮೆ ಕುತೂಹಲ, ಮತ್ತೆ ಕೆಲವೊಮ್ಮೆ ಆಸಕ್ತಿ ಕೆರಳಿಸುವುದು. ಹುಟ್ಟಿ ಬೆಳೆದ ಸಾಲಿನಿಂದ ಐಕ್ಯವಾಗುವವರೆಗೆ ಹೇಳುವ ತಂತ್ರ ಒಂದು ಬಗೆಯಾದರೆ, ಐಕ್ಯವಾದ ಕ್ಷೇತ್ರದಿಂದ ಹತ್ತು ದಿಕ್ಕು, ಹತ್ತು ಪ್ರದೇಶಗಳಲ್ಲಿ ಹೇಗೆ ಮೆರೆದು ಮಹಿಮಾನ್ವಿತರಾದರು ಎಂಬುದು ಮತ್ತೊಂದು ವಿಧಾನ.

ಮಾದೇಶ್ವರನು ತನ್ನ ಮಹಿಮೆ ಮತ್ತು ಪವಾಡಗಳ ಹಿರಿಮೆಯಿಂದ ಜನರನ್ನು ತನ್ನೆಡೆಗೆ ಸೆಳೆದುಕೊಂಡು ಅವನು ಈಶ್ವರನೆನಿಸಿಕೊಂಡ ಮೇಲೆ ಎಲ್ಲಾ ಮಠಗಳೂ ಮಾದೇಶ್ವರ ನಮ್ಮವನು ತಮ್ಮವನು ಎಂದು ಕೊಂಡಾಡಿದಂತೆ ಕಾಣುತ್ತದೆ.ಆದರೆ ಮಾದೇಶ್ವರ ಸುತ್ತೂರು, ಕುಂತೂರು, ಬದನವಾಳು ಇತ್ಯಾದಿ ಮಠಗಳಿಗೆ ಬಂದಾಗ, ಆ ಮಠಗಳು ಅವನ ಹಿರಿಮೆಯನ್ನು ಗುರುತಿಸದೆ ಅವನನ್ನು ತಿರಸ್ಕರಿಸಿದರು. ಹಾಗಾಗಿ ಆತ ಏಳುಮಲೆಗೆ ಹೋಗಿ ನೆಲೆಗೊಳ್ಳಬೇಕಾಯಿತು. ಇನ್ನು ಮಾದೇಶ್ವರನಿಗೆ ಮಾರ್ಗದರ್ಶಕರಾದರೆಂದು ತಿಳಿದುಬರುವ ಪ್ರಭುಸ್ವಾಮಿಗಳು ಕುಂತೂರಿನ ಸಮೀಪದಲ್ಲಿರುವ ಪ್ರಭುಸ್ವಾಮಿ ಬೆಟ್ಟದಲ್ಲಿದ್ದರೆಂದೂ ಇವರು ಕುಂತೂರು ಮಠಾಧೀಶರೆಂದೂ ಜನಪದ ಸಾಹಿತ್ಯ ಮಾಹಿತಿಯನ್ನು ಒದಗಿಸುತ್ತದೆ.

ಮಾದೇಶ್ವರನು ಯಾವುದೇ ಸ್ಥಾಪಿತ ಧರ್ಮ, ವ್ಯವಸ್ಥೆ, ಕಟ್ಟುಪಾಡುಗಳ ಹಂಗಿನಲ್ಲಿ ನಾನಿರಬಾರದು.ತನ್ನದೇ ಆದ ನೆಲೆಯನ್ನು ತಾನು ಕಂಡುಕೊಳ್ಳಬೇಕು ಎಂದು ನಿರ್ಧರಿಸಿ ಸೂಕ್ತ ನೆಲೆಯನ್ನು ಹುಡುಕುತ್ತಾ ಏಳುಮಲೆ ಪ್ರದೇಶಕ್ಕೆ ಬಂದನು. ಎಲ್ಲಾ ಬಗೆಯ ಧಾರ್ಮಿಕ, ಸಾಮಾಜಿಕ ಪ್ರಭಾವಗಳಿಂದ ಮುಕ್ತವಾಗಿದ್ದ ಏಳುಮಲೆ ಪ್ರದೇಶ ಆತನಿಗೆ ಸೂಕ್ತವಾಗಿ ಕಂಡಿತು. ಅಲ್ಲಿಗೆ ಬಂದ ತರುವಾಯ ತನ್ನದೇ ಸಂಪ್ರದಾಯ ಮತ್ತು ಶಿಷ್ಯವರ್ಗವನ್ನು ಆತ ನಿರ್ಮಿಸಿಕೊಳ್ಳಬೇಕಾಯಿತು. ಆದರೆ ಆತನ ದಾರಿ ಅಷ್ಟು ಸುಲಭವಾಗಿರಲಿಲ್ಲ. ಆತನ ಮಾತುಗಳನ್ನು ಯಾರು ಕೇಳುತ್ತಿರಲಿಲ್ಲ. ಇವನೊಬ್ಬ ಅನಾಮಧೇಯ ಜಂಗಮ, ಕಾಡುದೇವರು ಎಂದೆಲ್ಲಾ ಹೀಯಾಳಿಸುತ್ತಾರೆ. ನನಗೆ ಗುಡಿ ಕಟ್ಟಿಸಿಕೊಂಡು ಎಂದು ಕೇಳಿದಾಗ 'ಕಾಡು ಪರದೇಸಿ, ನಿನ್ಗೆ ಕಲ್ಲುಗುಡಿ ಕಟ್ಟೋ ತೀಟೆ ನನಗಿಲ್ಲ' ಎಂದು ಆಲಂಬಾಡಿಯ ಜುಂಜೇಗೌಡ ತಿರಸ್ಕಾರದಿಂದ ನುಡಿಯುತ್ತಾನೆ. ಬೇವಿನಹಟ್ಟಿ ಕಾಳಮ್ಮ ಮಾದೇಶ್ವರನ ಎಣ್ಣೆಮಜ್ಜನಕ್ಕೆ ಒಂದು ಹಿಡಿ ಎಳ್ಳು ಕೊಡಲು ಒಪ್ಪುವುದಿಲ್ಲ. ಹೀಗಾಗಿ ಹೆಜ್ಜೆ ಹಜ್ಜೆಗೂ ತನ್ನ ಸಾಮರ್ಥ್ಯವೇನೆಂಬುದನ್ನು ಸಿದ್ಧಪಡಿಸುವುದು ಮಾದೇಶ್ವರನಿಗೆ ಅನಿವಾರ್ಯವಾಯಿತು. ಮಾದೇಶ್ವರನ ಕಾವ್ಯದಲ್ಲಿ ಬೇಡ ಸಂಸ್ಕೃತಿಯ ದಟ್ಟವಾದ ಪ್ರಭಾವವನ್ನು ಗುರುತಿಸಬಹುದು. ಹೀಗೆ ಮಾದೇಶ್ವರನ ಭಕ್ತರಾಗಿ ಪರಿವರ್ತಿತರಾದ ಬೇಡರಿಗೆ ತಮ್ಮ ದೇವರ ಸಾಮರ್ಥ್ಯ, ಮಹಿಮೆ, ವೈಶಿಷ್ಟ್ಯಗಳನ್ನು ಹೆಚ್ಚುಗಾರಿಕೆಯಿಂದ ಹೇಳುವ ಮೂಲಕ ತಮ್ಮ ದೇವರನ್ನು ಸಮರ್ಥಿಸಿಕೊಳ್ಳುವುದೂ ಸಹ ಅಗತ್ಯವಾಗಿತ್ತು. ಈ ಕಾರಣಕ್ಕಾಗಿ ಆತನ ಸಾಧನೆ, ಹಿರಿಮೆಗಳನ್ನು ಸ್ತುತಿಸುವ, ಹೊಗಳುವ ಕಥೆ–ಪುರಾಣಗಳನ್ನು ಅವರು ಕಟ್ಟಿದರು. ಇವುಗಳನ್ನಾಧರಿಸಿ ಮಲೆಯ ಮಾದೇಶ್ವರ ಕಾವ್ಯದಂಥ ಮಹಾಕಾವ್ಯವೇ ರೂಪುಗೊಂಡಿತು. ಹೊಸದೊಂದು ಧರ್ಮವನ್ನು ಸ್ವೀಕರಿಸಿದ ಜನರಲ್ಲಿ ಆ ಧರ್ಮವನ್ನು ಕುರಿತ ಅತಿಯಾದ ನಂಬಿಕೆ, ವಿಶ್ವಾಸ ಮತ್ತು ಹಳೆಯ ಧರ್ಮದ ಬಗೆಗೆ ವಿಪರೀತವಾದ ದ್ವೇಷ, ತಿರಸ್ಕಾರಗಳು ಅತಿಯಾಗಿಯೇ ಇರುತ್ತವೆ. ಕರ್ನಾಟಕದ ಧಾರ್ಮಿಕ ಇತಿಹಾಸದಲ್ಲಿ, ಶೈವ ಮತ್ತು

ಜೈನಧರ್ಮಗಳ ಸಂಘರ್ಷಗಳ ವಿಷಯದಲ್ಲಿ ಈ ಅಂಶ ಸ್ಪಷ್ಟ. ಇದೇ ಪ್ರಕ್ರಿಯೆಯನ್ನು ಮಾದೇಶ್ವರನ ಪರಂಪರೆಯಲ್ಲಿಯೂ ಗುರುತಿಸಬಹುದಾಗಿದೆ.

ಒಂದು ನಿರ್ದಿಷ್ಟ ಉದ್ದೇಶ ಸಾಧನೆಗಾಗಿ ಭೂಲೋಕದಲ್ಲಿ ಜನ್ಮ ತಾಳುವುದು, ಭಕ್ತರನ್ನು ಪರೀಕ್ಷಿಸುವುದು, ದುಷ್ಟರನ್ನು ಶಿಕ್ಷಿಸುವುದು, ಪವಾಡಗಳನ್ನು ಮಾಡುವುದು..... ಇದೆಲ್ಲವೂ ಸಾಮಾನ್ಯವಾಗಿ ಎಲ್ಲ ಪುರಾಣ ಪುರುಷರ ಚರಿತ್ರೆಯಲ್ಲಿ ಕಂಡುಬರುವ ಒಂದು ಸಿದ್ಧ ಸೂತ್ರ.ಇದೇ ಸೂತ್ರ ಮಾದೇಶ್ವರನಿಗೂ ಅನ್ವಯವಾಗಿದೆ. ದೇವತೆಗಳನ್ನೆಲ್ಲ ತನ್ನ ಅಧೀನದಲ್ಲಿಟ್ಟುಕೊಳ್ಳುವಂತಹ ವರ ಪಡೆದು ಮೆರೆಯುತ್ತಿದ್ದ ಶ್ರವಣ ದೊರೆಯ ಅಹಂಕಾರವನ್ನು ಅಡಗಿಸಲು ಭೂಮಿ ಮೇಲೆ ಅವತರಿಸುತ್ತಾನೆ. ತನ್ನ ಹುಟ್ಟಿಗೆ ಸೂಕ್ಷ್ಮವಾದ ಗರ್ಭವನ್ನು ತಾನೇ ಪರೀಕ್ಷಿಸಿ ಆಯ್ದುಕೊಳ್ಳುತ್ತಾನೆ. ಪೌರಾಣಿಕ ವ್ಯಕ್ತಿಗಳು ಯಾರೂ ಕೂಡ ಗಂಡುಹೆಣ್ಣಿನ ಸಂಯೋಗದಿಂದ ಜನಿಸುವುದಿಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕು. ತಾಯಿ ಉತ್ರಾಜಮ್ಮ ಅಕ್ರಮವಾಗಿ ಗರ್ಭ ಧರಿಸಿದ್ದಾಳೆಂಬ ಅಪವಾದವನ್ನು ಹೋಗಲಾಡಿಸುವುದಕ್ಕಾಗಿ ಮಾದೇಶ್ವರ ಅವಳ ಗರ್ಭದಲ್ಲಿದ್ದುಕೊಂಡೇ ಅನೇಕ ಪವಾಡಗಳನ್ನು ಮಾಡುತ್ತಾನೆ. ತಾನು ಎಲ್ಲರೂ ಬರುವ ಮಾರ್ಗದಲ್ಲಿ ಧರೆಗೆ ಬರಲಾರೆ ಎಂದು ತಾಯಿಗೆ ತಿಳಿಸಿ ಅವಳ ಬೆನ್ನನ್ನು ಉಗುರಿನಿಂದ ಸೀಳಿಕೊಂಡು ಹೊರಬರುತ್ತಾನೆ. ಹೊರಬಂದ ನಂತರ ತಾಯಿಯ ಬೆನ್ನನ್ನು ಮೊದಲಿದ್ದ ರೂಪಕ್ಕೆ ತರುತ್ತಾನೆ.

ಮಾದೇಶ್ವರನ ಬಾಲಲೀಲೆಗಳನ್ನು ಗಮನಿಸಿದರೆ ಅವನು ಮಹಿಮಾನ್ವಿತ ಎಂಬುದು ಸಿದ್ಧವಾಗುತ್ತದೆ. ಮಾಯದ ಹುಲಿ ಮಾಡಿಕೊಂಡು ಸವಾರಿ ಮಾಡುತ್ತಾನೆ. ಸೌದೆ ತಂದುಹಾಕು ಎಂದರೆ ಹಾವುಗಳನ್ನೆಲ್ಲ ನುಲಿದು ತಂದು ಉಗ್ರಾಣಕ್ಕೆ ಹಾಕುತ್ತಾನೆ. ಹಸಿವಾಗಿದೆ ಎಂದು ಹೇಳಿ ಪ್ರಭುದೇವರ ಎದುರಲ್ಲಿದ್ದ ವಿಷ ಬೆರೆಸಿದ ಹಾಲನ್ನು ಗಟಗಟನೆ ಕುಡಿಯುತ್ತಾನೆ. ಪೂಜೆಗೆ ಹೂವು ಪತ್ರೆ ತರಲು ಕಳಿಸಿದರೆ ಹಾವು, ಗೊದ್ದ, ಹಲ್ಲಿ, ಚೇಳುಗಳನ್ನೆಲ್ಲ ಜಜ್ಜಿ ಸಾಯಿಸಿ, ಚೀಲದಲ್ಲಿ ತುಂಬಿ ತಂದು ಅದನ್ನು ಗುರುದೇವರು ಸ್ನಾನಮಾಡಿ ಹರಿವ ಹಳ್ಳದಲ್ಲಿ ಅದ್ದುತ್ತಾನೆ. ಅವೆಲ್ಲವೂ ಹೂವುಗಳಾಗಿ ಪರಿವರ್ತನೆ ಮಾಡುತ್ತಾನೆ. ಮಾದೇವನಿಗೆ ಅರ್ಪಿಸಿದ ಮಾಂಸವು ಹೂವು ಅಥವಾ ಲಿಂಗಗಳಾಗಿ ಪರಿವರ್ತನೆಯಾಗುತ್ತದೆ. ಬಿತ್ತಿದ ಅವರೆ ಮತ್ತು ರಾಗಿಗಳು ಒಂದೇ ದಿನದಲ್ಲಿ ಬೆಳೆದು ಫಲವಾಗಿ ಅವುಗಳನ್ನು ಬೇಯಿಸಿ ಊಟ ಮಾಡುವ ಪವಾಡವನ್ನು ಮಾಡುತ್ತಾನೆ.

ಅವತಾರ ಪುರುಷನಾಗಿ ಜನಿಸಿದವನಿಗೆ ಶಾಪ ಕೊಡುವ ಮತ್ತು ವರ ಕೊಡುವ ಶಕ್ತಿಯಿರುತ್ತದೆ.ತಾನು ಇಚ್ಛಿಸಿದ ರೂಪವನ್ನು ಧರಿಸುವ ಶಕ್ತಿ ಇರುತ್ತದೆ. ಹಾಗೇ ಇತರರ ರೂಪ ಪರಿವರ್ತನೆ ಮಾಡಬಲ್ಲ ಸಾಮರ್ಥ್ಯವೂ ಇರುತ್ತದೆ. ಈ ಎಲ್ಲ ಗುಣಗಳೂ ಸಹ ಮಾದೇಶ್ವರನಲ್ಲಿ ಧಾರಾಳವಾಗಿ ಕಂಡುಬರುತ್ತದೆ. ಮಾದೇಶ್ವರ ಅವತಾರ ಪುರುಷ ಎಂದು ಹೇಳಿದರಷ್ಟಕ್ಕೆ ಜನರು ಸುಮ್ಮನಿರುವುದಿಲ್ಲ. ಆತ ಪರಮಶಿವನ ಅವತಾರವೆಂದು ಸಾಬೀತುಪಡಿಸುವವರೆಗೂ ಅವರಿಗೆ ಸಮಾಧಾನವಿಲ್ಲ. ಅಹಂಕಾರಿಯಾದ ಶ್ರವಣ ದೊರೆಯ ಸಂಹಾರಕ್ಕೆಂದೇ ಆತನು ಧರೆಯಲ್ಲಿ ಜನಿಸಿದನೆಂದು ಸಮರ್ಥಿಸುತ್ತಾರೆ.ಬೇರೆ ದೇವತೆಗಳೊಂದಿಗೆ ಮಾದೇಶ್ವರನನ್ನು ಹೋಲಿಸಿ ಆತ ಬೇರೆಲ್ಲರಿಗಿಂತಲೂ ಶ್ರೇಷ್ಠ ಎಂದು ಹೇಳುತ್ತಾರೆ. ಇತರೆ ದೇವತೆಗಳೆಲ್ಲರೂ ನಾಲ್ಕಾರು ಮಂದಿ ಹೆಂಡಿರನ್ನು ಕಟ್ಟಿಕೊಂಡು ಸಂಸಾರಿಗಳಾದರೆ ಮಾದೇಶ್ವರ ಹೆಣ್ಣನ್ನು ಕಣ್ಣೆತ್ತಿಯೂ ನೋಡದೆ ತನ್ನ ಹಿರಿಮೆಯನ್ನು ತೋರುತ್ತಾನೆ. ಪರನಾರಿ ಸೋದರನಾಗಿ 'ಹೆಣ್ಣು ಅಂದ್ರೆ ಹೆತ್ತಾಯಿ ಮಾಡ್ಕೊಂಡು, ಮಣ್ಣು ಅಂದ್ರೆ ಮುತ್ತಾಯಿ ಮಾಡ್ಕೊಂಡು, ಚಿನ್ನಕ್ಕಾಗಿ ಚಿಂತೆಮಾಡ್ದೆ, ಹಣಕ್ಕಾಗಿ ಹಟಮಾಡ್ದೆ, ಹೆಣ್ಣುಮಣ್ಣು ಕರಿತಲೆ ಜಾತಿ ಕಣ್ಣೆತ್ತಿ

ನೋಡ್ಬಾರ್ದು, ಕರ್ಮ ಹೊತ್ಕೊಳ್ಬಾರ್ದು' ಎಂಬ ಮಹಾತ್ಮ ಮಾದೇಶ್ವರ.

ಹೆಣ್ಣಿನ ಮೋಹವನ್ನು ಸಂಪೂರ್ಣ ತ್ಯಜಿಸಿದವನೆ ಪರಮಶ್ರೇಷ್ಠ ಎಂಬುದು ವೈದಿಕ ಸಂಸ್ಕೃತಿಯ ಮಾನದಂಡ. ಆದ್ದರಿಂದ ಹೆಣ್ಣನ್ನು ಕಣ್ಣೆತ್ತಿಯೂ ನೋಡದ ಮಾದೇವ ಜನಪದರ ದೃಷ್ಟಿಯಲ್ಲಿ ಎಲ್ಲ ದೇವರುಗಳಿಗಿಂತ ಮಿಗಿಲೆನಿಸಿಕೊಂಡಿದ್ದಾನೆ. ಬೇಡರ ಪೂಜಾರಿಯನ್ನು ಹೊಂದಿರುವ ಮಾದೇವ ಮಾಂಸದ ನೈವೇದ್ಯವನ್ನು ಬೇಡವೆನ್ನುವುದೂ ಇಲ್ಲಿ ಗಮನರ್ಹವಾಗಿದೆ. ಹಠದಲ್ಲಿಯೂ ಪಟ್ಟು ಹಿಡಿದು ಸಾಧನೆ ಮಾಡುವಲ್ಲಿಯೂ ಮಾದೇವನದು ಎತ್ತಿದ ಕೈ. ಭೂಲೋಕದಲ್ಲಿ ಆತನ ಹೆಸರು ಪ್ರಸಿದ್ಧಿಯಾಗಬೇಕು. ಕರವೆತ್ತಿ ಕೈಮುಗಿಯಬೇಕು, ಹನ್ನೆರಡಂಕಣದ ಗುಡಿಯಾಗಬೇಕು, ಮಜ್ಜಣದ ಬಾವಿಯಾಗಬೇಕು, ಬೇರೆಲ್ಲ ದೇವರುಗಳಿಗೆ ಹಾಲು, ನೀರಿನ ಮಜ್ಜನವಾದರೆ ಆತನಿಗೆ ಅಚ್ಚೆಳ್ಳಲ್ಲಿ ಹೆಚ್ಚಾಳದಿಂದ ಎಣ್ಣೆಮಜ್ಜನ ಆಗಬೇಕು ಹೀಗೆ ಒಂದೊಂದೇ ಬಯಕೆಗಳನ್ನು ಬಿಡದೆ ಪೂರೈಸಿಕೊಳ್ಳುತ್ತಾನೆ. ಹೀಗೆ ಮಾದೇಶ್ವರನಿಗೆ ಸಂಬಂಧಿಸಿದ ಪ್ರತಿಯೊಂದು ವರ್ಣನೆಯೂ ಸಹ ಅತನ ಮಹಿಮೆಯನ್ನು ವ್ಯಕ್ತಪಡಿಸುವುದಕ್ಕೆ ಪೂರಕವಾಗಿವೆ.

ಪೌರಾಣಿಕ ವ್ಯಕ್ತಿ ಐತಿಹಾಸಿಕವಾಗುವುದು. ಐತಿಹಾಸಿಕ ವ್ಯಕ್ತಿ ಪೌರಾಣಿಕವಾಗುವುದು ಜನಪದ ಪರಂಪರೆಯಲ್ಲಿ ನಿರಂತರವಾಗಿ ನಡೆಯುತ್ತಿರುವ ಪ್ರಕ್ರಿಯೆಯಾಗಿದೆ. ಕಾಲಮಾನದ ದೃಷ್ಟಿಯಿಂದ ವಾಸ್ತವ ಜಗತ್ತಿಗೆ ಹತ್ತಿರವಾದ ವ್ಯಕ್ತಿಯ ಘನತೆಯನ್ನು ಹೆಚ್ಚಿಸುವುದಕ್ಕಾಗಿ ಪುರಾಣೀಕರಣ ಅಗತ್ಯವಾಗಿದೆ. ಮಾದೇಶ್ವರನ ಪರಂಪರೆಯ ನಿರ್ಮಾಣದಲ್ಲಿ ಪುರಾಣೀಕರಣ ಬಹಳ ಮಹತ್ವದ ಪಾತ್ರ ವಹಿಸಿದೆ. ಪವಾಡ, ಮಾಯಾವಿ ಗುಣಗಳು ಸಾಮಾನ್ಯವಾಗಿ ಎಲ್ಲ ದೇವತೆಗಳಲ್ಲಿಯೂ ಕಂಡುಬರುವ ಗುಣಗಳೇ ಆಗಿವೆ. ಆದ್ದರಿಂದ ಬರೀ ಇದಿಷ್ಟೇ ಆಗಿದ್ದರೆ ಮಾದೇವ ಉಳಿದ ದೇವತೆಗಳಿಗಿಂತ ಭಿನ್ನವಾಗುತ್ತಿರಲಿಲ್ಲ ಮತ್ತು ಉಳಿದ ದೇವತೆಗಳಂತೆ ಜನಪದ ಪ್ರಪಂಚಕ್ಕೆ ಅಲೌಕಿಕನಾಗಿಯೇ ಉಳಿಯುತ್ತಿದ್ದ. ಮಾದೇವನನ್ನು ಒಬ್ಬ ದೈವಿಕ ವ್ಯಕ್ತಿಯಾಗಿ ಕಲ್ಪಿಸಿ, ಅವನ ವಾಸ್ತವ ಬದುಕಿನ ವಿವರಗಳನ್ನು ಈ ದೈವಿಕ ಹಿನ್ನೆಲೆಯಲ್ಲಿ ವಿವರಿಸಿರುವುದರಿಂದ ಜನಪದ ಪ್ರಪಂಚದಲ್ಲಿ ಮಾದೇವ ಗಟ್ಟಿಯಾಗಿ ನೆಲೆ ನಿಲ್ಲಲು ಸಾಧ್ಯವಾಯಿತು.

**ಪರಾಮರ್ಶನ ಗ್ರಂಥಗಳು**


- ದೇಜಗೌ. (2015). *ಜಾನಪದ ಅಧ್ಯಯನ.* ಡಿವಿಕೆ ಮೂರ್ತಿ.
- ದೊಡ್ಡಮಾದಯ್ಯ. ಸಿ. (19900. *ಓಂ ಮಲೆಮಾದೇಶ್ವರ ಮಹಿಮೆ.* ಧರ್ಮದರ್ಶಿ ಮಂಡಲಿ, ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನ.
- ಕಾಳೇಗೌಡ ನಾಗವಾರ ಮತ್ತು ಅಂಬಳಿಕೆ ಹಿರಿಯಣ್ಣ. (2000). *ಜೀಶಂಪ ಅವರ ಜಾನಪದ ಬರಹಗಳು.* ಕರ್ನಾಟಕ ಮತ್ತು ಯಕ್ಷಗಾನ ಅಕಾಡೆಮಿ.
- ನಾಯಕ, ಹಾ. ಮಾ. (2019). *ಜಾನಪದ ಸ್ವರೂಪ.* ಗೀತಾಂಜಲಿ ಪುಸ್ತಕ ಪ್ರಕಾಶನ.
- ರಾಜಶೇಖರ, ಪಿ.ಕೆ. (2007). *ಜನಪದ ಮಹಾಕಾವ್ಯ ಮಲೆಯ ಮಾದೇಶ್ವರ ಕಥಾಮಂಜರಿ.* ಹೊನ್ನಾರು ಜನಪದ ಗಾಯಕರು.
- ರಾಜಶೇಖರ ಪಿ. ಕೆ. (2006). *ಜನಪದ ಮಹಾಕಾವ್ಯ ಮಲೆಯ ಮಾದೇಶ್ವರ. ಸಂಪುಟ–1 ಮತ್ತು 2*, ಕನ್ನಡ ಮತ್ತು ಸಂಸ್ಕೃತಿ ಇಲಾಖೆ.